ನಿಮ್ಮೊಡನೆ

# ಮಾತೆಂಬುದು ಜ್ಯೋತಿರ್ಲಿಂಗ

**ದ್ವೇಷಭಾಷಣ ಮತ್ತು ದ್ವೇಷಾಪರಾಧ ಪ್ರತಿಬಂಧಕ ಮಸೂದೆ ಮಂಡಿಸುವಾಗ ಅನೇಕರು ವಿರೋಧ ವ್ಯಕ್ತಪಡಿಸಿದರು. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ದಬ್ಬಾಳಿಕೆ ಎಂದರು. ಅಭಿವ್ಯಕ್ತಿ ಸ್ವಾತಂತ್ರ್ಯ ದ್ವೇಷ ಹರಡಲು ಅಲ್ಲ ಎಂಬ ಮೂಲ ಮಾತನ್ನೇ ಮರೆತಂತಿದೆ.**

ದ್ವೇಷಭಾಷಣ ನಿಷೇಧ, ದ್ವೇಷಾಪರಾಧ ಪ್ರತಿಬಂಧಕ ಮಸೂದೆಗೆ ವಿರೋಧ ವ್ಯಕ್ತವಾಗಿದ್ದೇ ನಮ್ಮ ಸಮಾಜದ ದುರಂತ ಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. ಆದರೆ ಇಂಥ ವಿರೋಧಗಳ ನಡುವೆಯೂ ಮಸೂದೆ ಮಂಡನೆಯಾಗಿದ್ದು ಸ್ವಾಗತಾರ್ಹ.

ಯಾರು ಯಾವಾಗ ಬೇಕಾದರೂ, ಯಾವ ಕೋಮು, ಪಂಗಡ, ಲಿಂಗ ಇವುಗಳನ್ನು ಹೀಯಾಳಿಸಬಹುದು. ವೇದಿಕೆಯಿಂದಲೇ ಹೀಗಳೆಯಬಹುದು. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸ್ವೇಚ್ಛೆಯಾಗಿಸಿಕೊಂಡು, ಬಾಯಿಗೆ ಬಂದಂತೆ ಮಾತಾಡಬಹುದು. ತಮ್ಮ ರೋಷ, ದ್ವೇಷಗಳನ್ನು ಮಾತಿನಲ್ಲಿ ತೇಲಿಬಿಟ್ಟು, ಉಳಿದವರ ಹೃದಯದೊಳಗೂ ವಿಷ ಹಿಂಡುವ ಕೆಲಸ ಮಾಡಬಹುದು. ಇಂಥದ್ದಕ್ಕೆಲ್ಲ ಒಪ್ಪಿಗೆ ಸೂಚಿಸುವುದೇ ವಿರೋಧ ವ್ಯಕ್ತಪಡಿಸುವವರ ನಿಲುವಾಗಿತ್ತು.

ಒಬ್ಬ ವ್ಯಕ್ತಿ ಒಂದು ಗುಂಪಿನಲ್ಲಿ ಇನ್ನೊಂದು ಗುಂಪಿನವರ ವಿರುದ್ಧ ಮಾತಾಡುವುದು, ಸಾರ್ವಜನಿಕ ಜೀವನದಲ್ಲಿರುವವರ ತೇಜೋವಧೆ ಮಾಡುವುದು, ಎರಡು ಗುಂಪಿನ ನಡುವಿನ ಸೌಹಾರ್ದ ಕದಡುವುದು ಇದೆಲ್ಲವನ್ನೂ ಒಪ್ಪಿಕೊಂಡಂತೆ ಆಗುತ್ತದೆ.

ಕರ್ನಾಟಕ ರಾಜ್ಯವು ಸರ್ವಜನಾಂಗದ ಶಾಂತಿಯ ತೋಟ. ಇದರಲ್ಲಿಯ ಸೌಹಾರ್ದ ಮತ್ತು ಶಾಂತಿಯನ್ನು ಕದಡುವ ಎಂಥದ್ದೇ ಪ್ರಯತ್ನವಾದರೂ ಅದನ್ನು ತಡೆಯಲು ಇಂಥ ಕಾಯ್ದೆಗಳಾಗುವುದು ಸ್ವಾಗತಾರ್ಹವಾಗಿದೆ.

ಮೊದಲ ಸಲ ದ್ವೇಷಭಾಷಣ ಅಥವಾ ಪ್ರಚೋದನಾಕಾರಿ ಮಾತುಗಳನ್ನಾಡಿದವರಿಗೆ ದಂಡ ಮತ್ತು ಶಿಕ್ಷೆ ವಿಧಿಸಲಾಗುತ್ತದೆ. ಪೊಲೀಸರು ನೇರವಾಗಿ ಬಂಧಿಸುವ ಅವಕಾಶವೂ ಇದೆ. ನಮ್ಮ ನಾಡಿನ ಆಂತರಿಕ ಶಾಂತಿ ವ್ಯವಸ್ಥೆ ಕಾಪಾಡಲು ಈ ಕಟ್ಟುನಿಟ್ಟಿನ ಕ್ರಮಗಳು ಜಾರಿಯಾಗಲೇಬೇಕಿವೆ.

ಇಲ್ಲಿ ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕುತ್ತಿಲ್ಲ. ಆದರೆ ಭಿನ್ನಾಭಿಪ್ರಾಯವನ್ನು ದ್ವೇಷದ ಮೂಲಕ ಅಭಿವ್ಯಕ್ತಿಸುವುದನ್ನು ತಡೆಯಲಾಗುತ್ತಿದೆ. ಇನ್ನೊಬ್ಬರನ್ನು ಹೀಗಳೆಯುವ ಬದಲು ಸಾತ್ವಿಕವಾಗಿ ತಮ್ಮ ಆಕ್ಷೇಪಗಳನ್ನು ವ್ಯಕ್ತಪಡಿಸುವುದು ಅಭಿವ್ಯಕ್ತಿ ಸ್ವಾತಂತ್ರ್ಯವಾಗಿದೆ. ಸ್ವೇಚ್ಛೆ ಮತ್ತು ದ್ವೇಷಾಸೂಯೆಗಳನ್ನು ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಹರಡುವುದನ್ನು ತಡೆಯುವಲ್ಲಿ ಈ ಕ್ರಮಗಳು ಎಚ್ಚರಿಕೆಯ ಗಂಟೆಯಾಗಲಿವೆ.

ಪೌರಾಣಿಕ ಪಾತ್ರ, ಐತಿಹಾಸಿಕ ವ್ಯಕ್ತಿ, ನಮ್ಮ ದೇಶಾಭಿಮಾನದ ಪದ್ಯ ಎಲ್ಲವೂ ಚುನಾವಣೆಯ ಚಲಾವಣೆಯ ನಾಣ್ಯಗಳಾಗಿರುವುದೇ ದುರಂತ. ನಮಗೆ ದೇಗುಲಗಳಾಗಲಿ, ಗಗನಚುಂಬಿ ಪ್ರತಿಮೆ, ವಿಗ್ರಹಗಳಾಗಲಿ, ನಮ್ಮ ದೇಶದ ಉನ್ನತಿಯನ್ನು ಸಾರುವುದಿಲ್ಲ. ನಮ್ಮ ಉದ್ಯೋಗದ ಪ್ರಮಾಣ ಹೆಚ್ಚಬೇಕು. ತಲಾ ಆದಾಯ ಹೆಚ್ಚಬೇಕು. ಸಂತೋಷ ಮತ್ತು ಹಸಿವಿನ ಸೂಚ್ಯಂಕದಲ್ಲಿ ಭಾರತದ ಸ್ಥಾನ ಉನ್ನತವಾಗಬೇಕು.

ಅಭಿವ್ಯಕ್ತಿ ಸ್ವಾತಂತ್ರ್ಯದ ಸೂಚ್ಯಂಕದಲ್ಲಿ ಮಾಧ್ಯಮಗಳನ್ನು ಹತ್ತಿಕ್ಕುವುದೂ ನಮ್ಮಲ್ಲಿ ಹೆಚ್ಚಾಗಿದೆ ಎಂದು ತೋರಿದೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಯಾರು ಬೇಕಾದವರೂ ತಮಗೆ ಆಗದವರ ಬಗ್ಗೆ ಮಾತಾಡುವುದು, ಪ್ರಚೋದಿಸುವುದು ಹೆಚ್ಚಾಗಿದೆ. ಈ ಮಸೂದೆಯಿಂದಾಗಿ ಸಾರ್ವಜನಿಕ ವೇದಿಕೆಗಳಷ್ಟೇ ಅಲ್ಲ, ಸಾಮಾಜಿಕ ಜಾಲತಾಣಗಳಲ್ಲಿಯೂ ಯಾರನ್ನೂ ಹೀಯಾಳಿಸುವ ಬರಹಗಳನ್ನು ಹಾಕದಂತೆ ಆಗುತ್ತದೆ.

ನಮ್ಮ ಯುವಜನರ ಭಾವಲೋಕದಲ್ಲಿ ವಿನಾಕಾರಣದ ದ್ವೇಷಕ್ಕೆ ಪ್ರೇರೇಪಿಸುವ ಇಂಥ ಮಾತುಗಳು ನಮಗೆ ಬೇಕೆ? ಯಾವ ಪಕ್ಷ ಆದರೇನು, ಯಾರಾದರೇನು? ಅರಿವೇ ಗುರುನುಡಿ ಜ್ಯೋತಿರ್ಲಿಂಗ, ದಯವೇ ಧರ್ಮದ ಮೂಲ ತರಂಗ ಅಂತ ಕಣವಿಯವರು ಹೇಳಿದಂತೆ ಬದುಕುವುದು ಕಲಿಸುವುದಾದರೆ ಯಾರೂ ವಿರೋಧಿಸಕೂಡದು. ನುಡಿದರೆ ಮುತ್ತಿನಹಾರದಂತಿರಬೇಕು ಎಂಬ ವಚನದಂತೆ ನಮ್ಮ ನಡವಳಿಕೆಗಳಿರಬೇಕು. ನುಡಿ ಹೇಳಿಕೆಗಳಿರಬೇಕು. ಯಾವುದು ದ್ವೇಷಭಾಷಣ, ಯಾವುದು ದ್ವೇಷಾಪರಾಧ ಎಂಬುದರ ಸ್ಪಷ್ಟ ಚಿತ್ರಣ ಈ ಮಸೂದೆಯಿಂದ ಸಿಗುವುದಾದರೆ ಇದು ಖಂಡಿತವಾಗಿಯೂ ಸ್ವಾಗತಾರ್ಹವಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ, ಯೂಟ್ಯೂಬರ್‌ಗಳು ತಮ್ಮದೇ ವಾಹಿನಿಗಳಲ್ಲಿ ಮನಸಿಗೆ ಬಂದಂತೆ ಮಾತಾಡುವುದು ತಡೆದಂತಾಗುತ್ತದೆ. ಯೂಟ್ಯೂಬರ್‌ಗಳನ್ನೂ, ಸಾಮಾಜಿಕ ಜಾಲತಾಣಗಳನ್ನೂ ಈ ಕಾಯ್ದೆಯ ವ್ಯಾಪ್ತಿಗೆ ತಂದಿರುವುದು ಸಮಾಧಾನದ ವಿಷಯವಾಗಿದೆ. ಇಲ್ಲದಿದ್ದರೆ ಜನರ ಅಂಗೈಯಲ್ಲಿರುವ ಜಗತ್ತಿನಿಂದಲೇ ಅವಹೇಳನಕಾರಿ ಮತ್ತು ಪ್ರಚೋದನಾಕಾರಿ ಮಾತುಗಳು ಹರಡುತ್ತಿದ್ದವು. ವೈರಸ್‌ನಂತೆಯೇ ನಮ್ಮೊಳಗನ್ನು ತಿನ್ನುತ್ತಿದ್ದವು. ಇದೀಗ ಇಂಥದ್ದಕ್ಕೆ ಶಿಕ್ಷೆಯ ಮೂಲಕ ಕಡಿವಾಣ ಹಾಕುತ್ತಿರುವುದು ಸ್ವಾಗತಾರ್ಹವಾಗಿದೆ. ಶಿಕ್ಷೆ ಇದೆಯೆಂಬ ಎಚ್ಚರಿಕೆಯೇ ಇಂಥ ಕುಕೃತ್ಯಗಳಿಗೆ ತಡೆಗೋಡೆಯಾಗಲಿ.

■ ರಶ್ಮಿ ಎಸ್



ವಿಜಯ